**ಪಾಠ 13**

## ಸಭೆ:

# ಅದರ ಹಿರಿಯರು, ಅವರ ಅರ್ಹತೆಗಳು

**ಅರ್ಹತೆಗಳು ಯಾದಿ ಮಾಡಲ್ಪಟ್ಟಿವೆ**

| **ನಕಾರಾರ್ತಕ ಗುರುತುಗಳು** | **ಉಲ್ಲೇಖಗಳು** | **ಅರ್ಥ** |
|---|---|---|
| ಜಗಳ ಮಾಡುವವನು ಆಗಿರ ಬಾರದು (ಕಲಹಕಾರಣಲ್ಲದವನು) | 1 ತಿಮೊಥೆ 3:3 | ಜಗಳಗಂಟನಾಗಿರಬಾರದು (ಕಲಹ ಮಾಡುವವನಲ್ಲದೆ) |
| ದ್ರವ್ಯಾಶೆಯಿಲ್ಲದವನು (ನೀಚಲಾಭವನ್ನು ಅಪೇಕ್ಷಿಸುವವನಾಗಿರಬಾರದು) | 1 ತಿಮೊಥೆ 3:3; ತೀತ 1:7 | ಆಶಿಸುವವನಾಗಿರ ಬಾರದು (ದುರ್ಲಾಭದ ಅಪೇಕ್ಷೆಯಿಲ್ಲದವನು) |
| ಕುತರ್ಕ ಮಾಡುವವನಾಗಿರಬಾರದು | 1 ತಿಮೊಥೆ 3:3; ತೀತ 1:7 | ದಂಗೆಖೋರನಾಗಿರ ಬಾರದು |
| ಹೊಸದಾಗಿ ಸಭೆಯಲ್ಲಿ ಸೇರಿದವ ನಾಗಿರಬಾರದು | 1 ತಿಮೊಥೆ 3:6 | ಹೊಸದಾಗಿ ಮಾರ್ಪಾಟು ಹೊಂದಿದವನಾಗಿರ ಬಾರದು |
| ಕುಡಿದು ಜಗಳಾಡುವವ ನಾಗಿರ ಬಾರದು | 1 ತಿಮೊಥೆ 3:3; ತೀತ 1:7 | ಮಧ್ಯಪಾನ ಮತ್ತನಾಗುವವ ನಾಗಿರ ಬಾರದು |
| ಸ್ವೇಚ್ಛಾಪರನಾಗಿರಬಾರದು | ತೀತ 1:7 | ತನ್ನ ಮಾರ್ಗವನ್ನೆ ಹಿಡಿಯಲು ಹಟವುಳ್ಳವನಾಗಿರಬಾರದು |
| ಮುಂಗೋಪಿಯಾಗಿರಬಾರದು | ತೀತ 1:7 | ಕೋಪ ಸ್ವಭಾವವುಳ್ಳವನಾಗಿರ ಬಾರದು |
| **ಸಕಾರಾತ್ಮಕ ಗುರುತುಗಳು** | | |
| ಬೋಧಿಸುವದರಲ್ಲಿ ಪ್ರವೀಣನು | 1 ತಿಮೊಥೆ 3:2 | ಬೋಧಿಸಲು ಸಮರ್ಥನೂ ಸಿದ್ಧನೂ ಆಗಿರಬೇಕು |
| ದೋಷಾರೋಪಣೆಯಿಲ್ಲದವನು | 1 ತಿಮೊಥೆ 3:2; ತೀತ 1:6 | ಅವನಿಗೆ ವಿರುದ್ಧವಾಗಿ ಏನೂ ಇರಬಾರದು |
| ಸಾತ್ವಿಕನು | 1 ತಿಮೊಥೆ 3:3 | ತಾಳ್ಮೆಯುಳ್ಳವನು, ದೀನನು |
| ಅತಿಥಿ ಸತ್ಕಾರ ಮಾಡುವವನು | 1 ತಿಮೊಥೆ 3:2 | ಪರಿಚಯವಿಲ್ಲದವರನ್ನು ಪ್ರೀತಿಸುವವನು - ಅವರ ಬಗ್ಗೆ ಆಲೋಚಿಸುವವನು |
| ಹೊರಗಣವರಿಂದ ಒಳ್ಳೆಯವನೆನಿಸಿ ಕೊಂಡವನು | 1 ತಿಮೊಥೆ 3:7 | ಹೊರಗಿನವರಿಂದ ಗೌರವಿಸಲ್ಪಡುವವನು |
| ನಂಬಿಕೆಯುಳ್ಳ ಮಕ್ಕಳನ್ನು ಹೊಂದಿದವನು | ತೀತ 1:6 | ನಂಬಿಗಸ್ತ ಮಕ್ಕಳು |
| ನಂಬಿಗಸ್ತ ವಾಕ್ಯವನ್ನು ಹಿಡಿದುಕೊಂಡವನು | 1 ತಿಮೊಥೆ 3:2 | ವಾಕ್ಯಕ್ಕೆ ನಿಷ್ಠೆಯುಳ್ಳವನು |
| ದೇವ ಭಕ್ತನು | ತೀತ 1:8 | ಹೃದಯದಲ್ಲಿ, ಜೀವನದಲ್ಲಿ ಭಯಭಕ್ತಿಯಿಂದ ಇರುವವನು |

| | | |
|---|---|---|
| ಏಕ ಪತ್ನಿಯುಳ್ಳವನು | 1 ತಿಮೊಥೆ 3:2, ತೀತ 1:6 | ಬಹುಪತ್ನಿತ್ವವುಳ್ಳವನಾಗಿರ ಬಾರದು |
| ನ್ಯಾಯವಂತನು | ತೀತ 1:8 | ತನ್ನ ವ್ಯವಹಾರಗಳಲ್ಲಿ ಸರಿಯಾಗಿರುವವನು |
| ಒಳ್ಳೇದನ್ನು ಪ್ರೀತಿಸುವವನು | ತೀತ 1:8 | ಒಳ್ಳೇ ಜನರನ್ನು, ಒಳ್ಳೇ ಸಂಗತಿಗಳನ್ನು, ಹುಡುಕುವವನು |
| ಮಾನಸ್ತನು | 1 ತಿಮೊಥೆ 3:2 | ಒಳ್ಳೇ ನಡತೆ - ಸುಸ್ವಭಾವ |
| ಸ್ವಂತ ಮನೆಯನ್ನು ಚೆನ್ನಾಗಿ ಆಳುವವನು (ಮಕ್ಕಳನ್ನು ಅಧೀನದಲ್ಲಿಟ್ಟು ಕೊಂಡವನು) | 1 ತಿಮೊಥೆ 3:4, ತೀತ 1:6 | ತನ್ನ ಮನೆಯನ್ನು ಯೋಗ್ಯವಾಗಿ ನಡಿಸುವವನು |
| ಸ್ವಸ್ತ ಚಿತ್ತನು | ತೀತ 1:8 | ಆತ್ಮದ ಯಜಮಾನ |
| ಜಿತೇಂದ್ರಿಯನು | 1 ತಿಮೊಥೆ 3:2 | ಒಳ್ಳೇ ಮನಸ್ಸಿನ ಮನುಷ್ಯ - ವಿವೇಕವುಳ್ಳವನು |
| ಮಿತವುಳ್ಳವನು | ತೀತ 1:8 | ಸ್ವಾರ್ಥತ್ಯಾಗಿ; ಕುಡುಕನಲ್ಲ |
| ಜಾಗರೂಕನು | 1 ತಿಮೊಥೆ 3:2 | ಎಚ್ಚರಿಕೆಯುಳ್ಳವನು |
| ನಿಂದೆಗೆ ಗುರಿಯಾಗದವನು | 1 ತಿಮೊಥೆ 3:7 | ಹೊರಗಿನಿಂದಲೂ ಸಹ |

**ಯೋಚಿಸಲು ಸಂಗತಿಗಳು**

1. **ಒಬ್ಬ ಹಿರಿಯನ ಅರ್ಹತೆಗಳಲ್ಲಿ ಎಷ್ಟು ನಕಾರಾತ್ಮಕ ಗುರುತುಗಳಿವೆ?**
2. **ಅವನ ಅರ್ಹತೆಗಳಲ್ಲಿ ಎಷ್ಟು ಸಕಾರಾತ್ಮಕ ಗುರುತುಗಳಿರುತ್ತವೆ?**
3. **ಹಣದ ಕಡೆಗೆ ಅವನ ಸಂಬಂಧವು ಯಾವ ಗುರಿತಿನಿಂದ ವ್ಯಕ್ತಪಡಿಸಲ್ಪಟ್ಟಿದೆ?**
4. **ಅವನ ಮನೆತನಕ್ಕೆ ಸಂಬಂಧಿಸಿದ ಗುರುತುಗಳನ್ನು ಹೆಸರಿನಿಂದ ಹೇಳಿರಿ.**
5. **ಇತರ ವ್ಯಕ್ತಿಗಳಿಗೆ – ಹೊರಗಿನವರಿಗೆ ಸಂಬಂಧಿಸಿ ಯಾವ ಗುಣಲಕ್ಷಣಗಳಿರುವವು?**
6. **ದೇವರ ವಾಕ್ಯಕ್ಕೆ ಸಂಬಂಧಿಸಿ ಯಾವ ಗುರುತುಗಳು ಇರುವವು?**
7. **ಸ್ವ – ನಿಯಂತ್ರಣದೊಂದಿಗೆ ಸಂಬಂಧಿಸಿರುವ ಗುರುತುಗಳನ್ನು ಹೇಳಿರಿ.**
8. **ಯೋಗ್ಯ ತೀರ್ಮಾನದೊಂದಿಗೆ ಸಂಬಂಧಿಸಿ ಯಾವ ಗುರುತುಗಳಿವೆ?**
9. **ಅರ್ಥದಲ್ಲಿ ಒಂದರ ಮೇಲೆ ಒಂದು ಬೀಳುವ ಕೆಲವು ಗುರುತುಗಳನ್ನು ಹೇಳಿರಿ.**
10. **"ದೋಷಾರೋಪಣೆ ಇಲ್ಲದವನು" ಅಂದರೆ ಪಾಪವಿಲ್ಲದವನು ಎಂದರ್ಥವಾಗುವುದೋ?**
11. **ಒಬ್ಬ ಹಿರಿಯನು ಈ ಎಲ್ಲಾ ಗುರುತುಗಳನ್ನು ಸಂಪೂರ್ಣತೆಯಲ್ಲಿಯೋ ಇಲ್ಲವೇ ಸಂಬಂಧಿಕ ಅರ್ಥದಲ್ಲಿಯೋ ಹೊಂದಿರಬೇಕು?**
    a. ಸಂಪೂರ್ಣತೆಯಲ್ಲಿ ಅವೆಲ್ಲವುಗಳನ್ನು ಹೊಂದಿಕೊಂಡಿರುವ ಹಿರಿಯನನ್ನು ನೀವು ನೋಡಿರುವಿರೋ?
    b. ಸಂಬಂಧಿಕ ಅರ್ಥದಲ್ಲಿ ಅವೆಲ್ಲವುಗಳನ್ನು ಹೊಂದಿಕೊಂಡಿರುವ ಹಿರಿಯನನ್ನು ನೀವು ನೋಡಿರುವಿರೋ?
12. **ಒಬ್ಬಂಟಿಗನು ಹಿರಿಯನಾಗಬಹುದೋ?**
13. **ಮಕ್ಕಳಿಲ್ಲದವನು ಹಿರಿಯನಾಗಬಹುದೋ?**
14. **ಕ್ರೈಸ್ತರಾಗಿರದ ಮಕ್ಕಳುಳ್ಳವನು ಹಿರಿಯನಾಗಬಹುದೋ?**

15. ಪ್ರತಿಯೊಬ್ಬ ಕ್ರೈಸ್ತನು ಸಾಧ್ಯವಾದರೆ ಈ ಗುರುತುಗಳನ್ನು ಹೊಂದಿಕೊಳ್ಳಲು ಅಪೇಕ್ಷಿಸಬಾರದೋ?
16. ಹಾಗಿದ್ದರೆ, ಹಿರಿಯನು ಎಲ್ಲಾ ಇತರರಿಗಿಂತ – ಹೇಗೆ ದಾಟಿಹೋಗಬಹುದು?
17. “ಹೊರಗಿನವರು” ಪರಿಶುದ್ಧ ಬರಹದ ಹಿರಿಯರಿಂದ ಪರಿಣಾಮ ಹೊಂದುವರು?
18. ಪರಿಶುದ್ಧ ಬರಹಕ್ಕೆ ಸಂಬಂಧಿಸದೇ ಇರುವ ಹಿರಿಯರಿಂದ ಹೊರಗಿನವರು ಹೇಗೆ ಪರಿಣಾಮ ಹೊಂದುವರು.
19. ಒಬ್ಬ ಹಿರಿಯನು ಮಿತಿಯಲ್ಲಿ ಕುಡಿಯುವವನಾಗಿರಬಹುದೋ? “ಮಿತಿಯುಳ್ಳವನು” ಎಂಬುದು ಈ ಅರ್ಥಕೊಡುವುದೋ?
20. ಹಿರಿಯನು ಚಲನಚಿತ್ರಗಳನ್ನು ನೋಡಬಹುದೋ (ತೀತ 2:7, 8)? ಕುಸ್ತಿ ಪಂದ್ಯಗಳಿಗೆ, ನರ್ತನಗಳಿಗೆ ಇಲ್ಲವೇ ಮಧ್ಯಪಾನ ಸ್ಥಳಗಳಿಗೆ ಹೋಗಬಹುದೋ (1 ಥೆಸಲೊನೀಕ 5:22)?

© 2009 Truth for Today